ಇ) ಮೈಸೂರು ತರ್ಹು ಅಗತ್ಯ ಪೂರೈಕೆಗಾಗಿ ಕಪಿಲಾ ನದಿಯಿಂದ ನೀರು ಪಡೆಯಲು ಸರ್ಕಾರದವರು ಯೋಜನೆ ಕೈಗೊಂಡಿರುವರೆ ?

ಈ) ಹಾಗಿದ್ದರೆ ಅದಕ್ಕೆ ಬೇಕಾಗುವ ಅಂದಾಜು ವೆಚ್ಚವೆಷ್ಟು ?

ಉ) ಈ ಬಗೆಯ ಯೋಜನೆಗಳಿಗೆ ವಿಶ್ವಬ್ಯಾಂಕ್ ನೆರವು ಪಡೆಯಲು ಸರ್ಕಾರದವರು ಕ್ರಮ ಕೈಗೊಂಡಿದ್ದಾರೆಯೆ ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—

ಅ) ಹಿಂಗಾರು ಮಳೆ ಸಾಕಷ್ಟು ಬಂದಿರುವುದರಿಂದ ಜಲಾಶಯದಲ್ಲಿ ಸಾಕಷ್ಟು ನೀರಿದ್ದು ಕುಡಿಯಂವ ನೀರಿಗ ಅಭಾವ ಪರಸ್ಥಿತಿ ಸಧ್ಯಕ್ಕೆ ಇರುವುದಿಲ್ಲ

ಆ) ಉದ್ಭವಿಸುವುದಿಲ್ಲ

ಇ) ಇಲ್ಲ

ಈ) ಉದ್ಭವಿಸುವುದಿಲ್ಲ

ಉ) ಉದ್ಭವಿಸುವುದಿಲ್ಲ

## ಅಥಣಿ ತಾಲ್ಲೂಕಿನಲ್ಲಿ ಮಾಡಲಾಗಿರುವ ಕೊಳವೆ ಬಾವಿಗಳು

೪೦೨. ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ).—ಮಾನ್ಯ ಗ್ರಾಮೀಣಾಭಿವೃದ್ಧಿ ಮಂತ್ರ್ರಿ ಪಂ. ರಾ. ಇಲಾಖೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಳೆದ ಮೂರು ವರ್ಷಗಳಲ್ಲಿ ಅಥಣಿ ತಾಲ್ಲೂಕಿನಲ್ಲಿ ತೋಡಲಾಗಿರುವ ಕೊಳವೆ ಬಾವಿಗಳ ಸಂಖ್ಯೆ ಎಷ್ಟು ?

(ವರ್ಷವಾರು ವಿವರ ನೀಡುವುದು)

ಆ) ಈ ವಿವರಗಳಲ್ಲಿ ಅಥಣಿ ವಿಧಾನಸಭಾ ಕ್ಷೇತ್ರದಲ್ಲಿ ವರ್ಷವಾರು ಎಷ್ಟುಬಾವಿಗಳನ್ನು ತೋಡಲಾಗಿದೆ?

ಇ) ಇವುಗಳಲ್ಲಿ ಎಷ್ಟು ಬಾವಿಗಳು ವಿಫಲವಾಗಿವೆ ಹಾಗೂ ಇವುಗಳ ದುರಸ್ತಿಗೆ ಕೈಕೊಳ್ಳಲಾದ ಕ್ರಮಗಳೇನು ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್‌ವಕ್ಫ್ ಮಂತ್ರಿಗಳು).—

ಅ) ೨೫೧ ಕೊಳವೆಬಾವಿಗಳನ್ನು ತೊಡಲಾಗಿದೆ.

| | |
|---|---|
| ೧೯೮೪–೮೫ ರಲ್ಲಿ | ೯೬ ಕೊಳವೆಬಾವಿಗಳು. |
| ೧೯೮೫–೮೬ ರಲ್ಲಿ | ೧೦೬ ಕೊ. ಬಾವಿಗಳು |
| ೧೯೮೬–೮೭ ರಲ್ಲಿ | ೪೯ ಕೊ. ಬಾವಿಗಳು. |
| ಒಟ್ಟು | ೨೫೧ |

ಆ)

| | |
|---|---|
| ೧೯೮೪–೮೫ರಲ್ಲಿ | ೩೮ |
| ೧೯೮೫–೮೬ರಲ್ಲಿ | ೬೦ |
| ೧೯೮೬–೮೭ರಲ್ಲಿ | ೨೭ |
| ಒಟ್ಟು | ೧೨೫ |

೫) ಅಥಣಿ ತಾಲ್ಲೂಕಿನಲ್ಲಿ ವಿಫಲವಾದ ಕೊಳವೆ ಬಾವಿಗಳು

| | | |
|---|---|---|
| ೧೯೮೪-೮೫ರಲ್ಲಿ | ೧೫ | ಕೊಳವೆ ಬಾವಿಗಳು |
| ೧೯೮೫-೮೬ರಲ್ಲಿ | ೧೫ | ಕೊಳವೆ ಬಾವಿಗಳು |
| ೧೯೮೬-೮೭ರಲ್ಲಿ | ೬ | ಕೊಳವೆ ಬಾವಿಗಳು |
| ಒಟ್ಟು | ೩೬ | |

ಅಥಣಿ ವಿಧಾನಸಭೆ ಕ್ಷೇತ್ರದಲ್ಲಿ ವಿಫಲವಾದ ಕೊಳವೆ ಬಾವಿಗಳು

| | | |
|---|---|---|
| ೧೯೮೪-೮೫ರಲ್ಲಿ | ೭ | ಕೊ. ಬಾವಿಗಳು |
| ೧೯೮೫-೮೬ರಲ್ಲಿ | ೯ | ಕೊ. ಬಾವಿಗಳು |
| ೧೯೮೬-೮೭ರಲ್ಲಿ | ೩ | ಕೊ. ಬಾವಿಗಳು |
| ಒಟ್ಟು | ೧೯ | |

ವಿಫಲಗೊಂಡಿರುವ ಕೊಳವೆ ಬಾವಿಗಳನ್ನು ಭೂಗರ್ಭ ತಜ್ಞರಿಂದ ಪುನ: ಪರಿಶೀಲನೆ ಮಾಡಿಸಿ ಯಶಸ್ವಿನ ಸಾಧ್ಯತೆ ಇದ್ದಲ್ಲಿ ಅಂತಹಾವಿಗಳನ್ನು ಆಳಮಾಡಿ ಸಫಲವಾಗುವಂತೆ ಪರಿವರ್ತಿಸಲು ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ.

## ಟಿ. ನರಸಿಪುರದಲ್ಲಿ ಕರ್ನಾಟಕ ಗೃಹ ಮಂಡಳಿಯ ವಸತಿ ಯೋಜನೆ

೭೬೧. ಶ್ರೀ ಹೆಚ್. ಸಿ. ಮಹದೇವಪ್ಪ (ಟಿ.ನರಸೀಪುರ).—ಮಾನ್ಯ ವಸತಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಟಿ. ನರಸೀಪುರದಲ್ಲಿ ಗೃಹ ಮಂಡಳಿಯಿಂದ ಗೃಹ ನಿರ್ಮಾಣ ಮಾಡುವ ಯೋಜನೆ ಸರ್ಕಾರದ ಪರಿಶೀಲನೆಯಲ್ಲಿದೆಯೇ ?

ಆ) ಹಾಗಿದ್ದಲ್ಲಿ ಈ ಯೋಜನೆಗೆ ಸರ್ಕಾರವು ಎಷ್ಟು ಎಕರೆ ಭೂಮಿಯನ್ನು ಸ್ವಾಧೀನ ಪಡಿಸಿ ಕೊಂಡಿದೆ. ಹಾಗೂ ನಿರ್ಮಾಣ ಕೆಲಸವನ್ನು ಯಾವಾಗ ಪ್ರಾರಂಭಿಸಲಾಗುವುದು.

ಶ್ರೀ ಮೊಹಮ್ಮದ್ ಮೊಯಿನುದ್ದೀನ್ (ವಸತಿ ರಾಜ್ಯ ಸಚಿವರು).

ಅ) ಇಲ್ಲ

ಆ) ಕರ್ನಾಟಕ ಗೃಹ ಮಂಡಳಿಯು ಸುಮಾರು ೩೪ ಎಕರೆ ೮ ಗುಂಟೆ ಜಮೀನನ್ನು ಸ್ವಾಧೀನ ಪಡಿಸಲು ಕ್ರಮ ಕೈಗೊಂಡಿದೆ ಮಂಡಳಿಯಿಂದ ಪ್ರಸ್ತಾವನೆ ಬಂದನಂತರ ಪರಿಶೀಲಿಸಲಾಗುವುದು.

## ರೆವಿನ್ಯೂ ಸೈಟುದಾರರ ಸಮಸ್ಯೆಗಳು

೫೪೯. ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಬೆಂಗಳೂರು ಅಭಿವೃದ್ಧಿ, ವಾರ್ತಾ ಪ್ರವಾಸೋದ್ಯಮ ಮಂತ್ರಿಗಳು

ಅ) ಬೆಂಗಳೂರಿನ ಸುತ್ತಲೂ ಜಮೀನನ್ನು ಕೊಂಡು ಸೈಟುಗಳನ್ನು ಮಾಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ? ಹಾಗೂ ಅಭಿವೃದ್ಧಿ ಪ್ರಾಧಿಕಾರವು ವಶಪಡಿಸಿಕೊಳ್ಳಲು ಯೋಜಿಸಿರುವ ಜಮೀನು ಎಷ್ಟು ?

ಆ) ಹೀಗೆ ಸೈಟುಗಳನ್ನು ಕೊಂಡವರು (ರೆವಿನ್ಯೂ ಸೈಟುದಾರರು) ಅದನ್ನು ತಮಗೆ ಮಾಡಿಸಿ ಕೊಡಬೇಕೆಂದು ಸರ್ಕಾರದವರನ್ನು ಅನೇಕ ಬಾರಿ ಮೇಲಿನಿಂದ ಮೇಲೆ ಒತ್ತಾಯಪಡಿಸುತ್ತಿರುವುದು ನಿಜವೇ ?